ಏನಾಗುತ್ತದೆ? ಎರಡನೆಯದಾಗಿ ಒಂದು cattle ಎಂದರೆ ಇವರು ನೀಡಿರುವಂತಹ definition ಏನೆಂದರೆ ನೂರು ಕೋಳಿಯಿದ್ದರೆ ಒಂದು cattle ಎಂದು ಮಾಡಿದ್ದಾರೆ. ಇದು ಯಾವತ್ತು ಮಾಡಿದ ಕಾನೂನು? ನೀವು ಅದನ್ನೆಲ್ಲ ತೆಗೆದು review ಮಾಡಿ. ನೂರು ಕೋಳಿ ಎಲ್ಲದರೂ ಮೇಯುವುದಕ್ಕೆ ಹೋಗುತ್ತದೆಯೇ? ಅದಕ್ಕೆ ಒಂದು cattle. ನಾಲ್ಕು ಕರು ಇದ್ದರೆ ಒಂದು cattle ಎಂದು ಮಾಡಿದ್ದಾರೆ. ಏನಿದು? ಈ ಕೋಷ್ಟಕ ಇದೆಯಲ್ಲ. ದಯಮಾಡಿ ಇದನ್ನು revise ಮಾಡಿ. Unless you revise it, it becomes a big issue. ಇವತ್ತು land is a problem. ಇವತ್ತು ನನ್ನ ಕ್ಷೇತ್ರದಲ್ಲಿ ಸುಮಾರು ಒಂದೂವರೆ ಸಾವಿರ ಜನ ನಾಲ್ಕೂವರೆ ಸಾವಿರ ಎಕರೆ ಸಾಗು ಮಾಡುತ್ತಿದ್ದಾರೆ. withheld ಮಾಡುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಇವತ್ತು ಅದು insufficient ಗೋಮಾಳವಾಗಿದೆಯೆನ್ನುವ ಒಂದೇ ಕಾರಣಕ್ಕೋಸ್ಕರ ಈ ರೀತಿ ಆಗಿದೆ. ಬಹುಶ: ನೀವು ಈ definition ಇಟ್ಟುಕೊಂಡರೆ ಅದೆಲ್ಲವೂ insufficient ಆಗುತ್ತದೆ. ದಯಮಾಡಿ ಆ definition ಇದೆಯಲ್ಲ, ಅದನ್ನು redefine ಮಾಡಿ. ನಾನು ಒಂದು ವಿಚಾರ ಹೇಳುವುದೇನೆಂದರೆ, ಇವತ್ತು ನಮ್ಮ ರಾಜ್ಯದಲ್ಲಿ ಅಲ್ಲ. ದೇಶದಲ್ಲಿಯೇ ಕೋಲಾರದವರು ಅತ್ಯಂತ ಹೆಚ್ಚಿಗೆ ಹಾಲನ್ನು ಕೊಡುತ್ತಿದ್ದಾರೆ. ಅವರು ಯಾರೂ ಕೂಡ ದನಗಳನ್ನು ಹೊಲದಲ್ಲಿ ಹೋಗಿ ಮೇಯಿಸುತ್ತಿಲ್ಲ. ಅದಕ್ಕೆ ಪರ್ಯಾಯವಾಗಿ ಬೇರೆ ಬೇರೆ methodಗಳು ಬಂದಿವೆ. ಇವೆಲ್ಲ ಬಂದಿರುವಂತಹ ಹಿನ್ನೆಲೆಯಲ್ಲಿ ನೀವು ಓಬಿರಾಯನ ಕಾಲದ ಕಾನೂನುಗಳನ್ನು ಬದಲಾವಣೆ ಮಾಡಿಕೊಳ್ಳದಿದ್ದರೆ, ನೀವು ರೈತರಿಗೆ ಸಹಾಯ ಮಾಡುವುದಕ್ಕೆ ಆಗುತ್ತದೆಯೇ? ದಯಮಾಡಿ ತಾವು ಯೋಚನೆ ಮಾಡಿ. ಇದು ಲಂಬಾಣಿ ಜನಾಂಗವಾದ ಎಸ್‌ಟಿ ಮತ್ತು ಎಸ್‌ಸಿ ಜನಾಂಗಕ್ಕೆ ತೊಂದರೆಯಾಗತಕ್ಕಂಥಾದ್ದು ಇದೆ. ದಯಮಾಡಿ ತಾವು ಯೋಚನೆ ಮಾಡಿ ಇದನ್ನು ಮರುಪರಿಶೀಲನೆ ಮಾಡಿ. ಅಲ್ಲಿಯವರೆಗೂ ನ್ಯಾಯ ದೊರಕುವುದಕ್ಕೆ ಸಾಧ್ಯವಿಲ್ಲ.

ಶ್ರೀ ರೇವೂ ನಾಯಕ್ ಬೆಳಮಗಿ: ಮಾನ್ಯ ಹಿರಿಯ ಸದಸ್ಯರು ಏನು ಹೇಳಿದ್ದಾರೆ, ಇದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಕುಣಿಗಲ್ ತಾಲ್ಲೂಕಿನಲ್ಲಿ ಪಶು ಆಸ್ಪತ್ರೆ ಸ್ಥಾಪನೆ

19 (128) ಶ್ರೀ ರಾಮಸ್ವಾಮಿ ಗೌಡ ಬಿ. ಬಿ. (ಕುಣಿಗಲ್):– ಮಾನ್ಯ ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು

ಪಶುಸಂಗೋಪನೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕುಣಿಗಲ್ ತಾಲ್ಲೂಕಿಗೆ 10ಕ್ಕೂ ಹೆಚ್ಚು ಪಶುವೈದ್ಯ ಆಸ್ಪತ್ರೆ ಮತ್ತು ಚಿಕಿತ್ಸಾ ಘಟಕಗಳು ತುರ್ತಾಗಿ ಅಗತ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸ್ಥಾಪನೆಗೆ ಸರ್ಕಾರ ಮಂಜೂರಾತಿ ನೀಡುವುದೆ ?

ಶ್ರೀ ರೇವೂನಾಯಕ್ ಬೆಳಮಗಿ (ಮಾನ್ಯ ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು):– 2007ರ ಜಾನುವಾರು ಗಣತಿಯಂತೆ ಕುಣಿಗಲ್ ತಾಲ್ಲೂಕಿನಲ್ಲಿ ಒಟ್ಟು 1,25,682 ಜಾನುವಾರು ಘಟಕಗಳಿರುತ್ತದೆ. ರಾಷ್ಟ್ರೀಯ ಕೃಷಿ ಆಯೋಗದ ಶಿಫಾರಸ್ಸಿನಂತೆ ಪ್ರತಿ 5,000 ಜಾನುವಾರು ಘಟಕಗಳಿಗೆ ಒಂದು ಪಶುವೈದ್ಯ ಸಂಸ್ಥೆ ಇರಬೇಕಾಗಿದ್ದು, ಆ ಪ್ರಕಾರ ತಾಲ್ಲೂಕಿಗೆ 25 ಪಶುವೈದ್ಯಕೀಯ ಸಂಸ್ಥೆಗಳು ಅವಶ್ಯಕವಿರುತ್ತದೆ. ಆದರೆ, ಈಗಾಗಲೇ ಕುಣಿಗಲ್ ತಾಲ್ಲೂಕಿನಲ್ಲಿ 29 ಪಶುವೈದ್ಯಕೀಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು, 4 ಸಂಸ್ಥೆಗಳು ಹೆಚ್ಚಾಗಿರುವುದರಿಂದ ತಾಲ್ಲೂಕಿಗೆ ಹೆಚ್ಚುವರಿ ಪಶುವೈದ್ಯಕೀಯ ಆಸ್ಪತ್ರೆ/ಪಶು ಚಿಕಿತ್ಸಾ ಘಟಕಗಳ ಅವಶ್ಯಕತೆ ಇರುವುದಿಲ್ಲ.

ಅಲ್ಲದೆ ರಾಜ್ಯದ ಬಹಳಷ್ಟು ಪಶು ಆಸ್ಪತ್ರೆ ಮತ್ತು ಪಶುಚಿಕಿತ್ಸಾಲಯಗಳಲ್ಲಿ ಮೂಲಭೂತ ಸೌಕರ್ಯದ ಕೊರತೆ ಮತ್ತು 770 ಪದವೀಧರ ಪಶುವೈದ್ಯರ ಕೊರತೆ ಇರುವುದರಿಂದ ಹೊಸದಾಗಿ ಪಶುವೈದ್ಯಕೀಯ ಸಂಸ್ಥೆಗಳನ್ನು ತೆರೆಯುವ ಪ್ರಸ್ತಾವನೆಯನ್ನು ತಾತ್ಕಾಲಿಕವಾಗಿ ಮುಂದೂಡಲಾಗಿದೆ.

ಅ) ಉದ್ಭವಿಸುವುದಿಲ್ಲ.

ಶ್ರೀ ಬಿ.ಬಿ. ರಾಮಸ್ವಾಮಿಗೌಡ :– ಮಾನ್ಯ ಅಧ್ಯಕ್ಷರೇ, ಇವರು ಉತ್ತರ ಕೊಟ್ಟಿರುವುದು ಅಷ್ಟು ಸಮಂಜಸವಾಗಿ ಕಾಣುತ್ತಿಲ್ಲ. ಕಾರಣವೇನೆಂದರೆ 2007ರಲ್ಲಿ ಜಾನುವಾರುಗಳ ಗಣತಿಯಂತೆ 25 ಪಶುವೈದ್ಯಕೀಯ ಸಂಸ್ಥೆಗಳು ಅವಶ್ಯಕತೆಯಿದ್ದು, ಈಗಾಗಲೇ ಅಲ್ಲಿ 29 ಪಶುವೈದ್ಯಕೀಯ ಸಂಸ್ಥೆಗಳು ಇರುತ್ತವೆ ಎಂದು ತಿಳಿಸಿದ್ದಾರೆ. ಕಳೆದ ವರ್ಷ ಮಾನ್ಯ ಮಂತ್ರಿಗಳಿಗೆ ನಮ್ಮ ತಾಲ್ಲೂಕಿಗೆ ಇನ್ನು ಹತ್ತು ಪಶುವೈದ್ಯಕೀಯ

ಶಾಲೆಗಳ ಅವಶ್ಯಕತೆಯಿದೆ ಎಂದು ದಾಖಲಾತಿಗಳ ಮುಖಾಂತರ ವರದಿಯನ್ನು ತೆಗೆದುಕೊಂಡು ಹೋಗಿ ಕೊಟ್ಟಿರುವಂತಹ ಸಂದರ್ಭದಲ್ಲಿ, ಈ ವರ್ಷ ಎಂದರೆ 2010–11ನೇ ಸಾಲಿನಲ್ಲಿ ಆಸ್ಪತ್ರೆಗಳನ್ನು ಒದಗಿಸಿಕೊಡುತ್ತೇವೆಂದು ಹೇಳಿದ್ದರು, ಆದರೆ ಈಗ ನೋಡಿದರೆ ಈ ರೀತಿ ಉತ್ತರವನ್ನು ಕೊಟ್ಟಿದ್ದಾರೆ. ನಮ್ಮ ಕುಣಿಗಲ್ ತಾಲ್ಲೂಕಿನಲ್ಲಿ ಆಸ್ಪತ್ರೆಗಳ ಸಂಖ್ಯೆ ಕಡಿಮೆ ಇದೆ, ಒಂದು ಆಸ್ಪತ್ರೆ ಬಿಟ್ಟು ಇನ್ನೊಂದು ಆಸ್ಪತ್ರೆಗೆ ಹೋಗಬೇಕೆಂದರೂ ಕೂಡ ಸುಮಾರು 15 ರಿಂದ 20 ಕಿ.ಮೀ. ದೂರದಲ್ಲಿರುವಂತಹ interior villages ಇವೆ. ಆದುದರಿಂದ ಕನಿಷ್ಟಪಕ್ಷ ಹಾಲ್ಕೆರೆ ಮತ್ತು ಸಿಂಗವನಹಳ್ಳಿ ಎರಡು ಹಳ್ಳಿಗಳಿಗಾದರೂ ಆಸ್ಪತ್ರೆಗಳನ್ನು ಮಂಜೂರು ಮಾಡಿಕೊಡಬೇಕು. ಅಲ್ಲಿ ಕಟ್ಟಡದ ವ್ಯವಸ್ಥೆ ಇದೆ, ಬೇರೆ ಇಲಾಖೆಗೆ ಸಂಬಂಧಪಟ್ಟಂತಹ ಖಾಲಿ ಕಟ್ಟಡಗಳನ್ನು ನಾವು ರೆಡಿ ಮಾಡಿಟ್ಟುಕೊಂಡಿದ್ದೇವೆ. ಅಲ್ಲಿಗೆ ಸಿಬ್ಬಂದಿ ಮತ್ತು ವೈದ್ಯಕೀಯ ಉಪಕರಣಗಳನ್ನು ಕೊಟ್ಟರೆ ಪಶು ವೈದ್ಯಕೀಯ ಆಸ್ಪತ್ರೆಗಳನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆಂದು ಹೇಳುತ್ತೇನೆ.

ಶ್ರೀ ರೇವೂ ನಾಯಕ್ ಬೆಳಮಗಿ :– ಮಾನ್ಯ ಅಧ್ಯಕ್ಷರೆ, ಕುಣಿಗಲ್ ಕ್ಷೇತ್ರದಲ್ಲಿ 2007ರ ಜಾನುವಾರು ಗಣತಿಯಂತೆ ತಾಲ್ಲೂಕಿನಲ್ಲಿ 1,25,682 ಜಾನುವಾರು ಘಟಕಗಳಿವೆ, ರಾಷ್ಟ್ರೀಯ ಕೃಷಿ ಆಯೋಗದ ಶಿಫಾರಸ್ಸಿನಂತೆ ಪ್ರತಿ 5,000 ಜಾನುವಾರು ಘಟಕಗಳಿಗೆ ಒಂದು ಪಶು ವೈದ್ಯ ಸಂಸ್ಥೆ ಇರಬೇಕಾಗಿದ್ದು, ಆ ಪ್ರಕಾರ ಈ ತಾಲ್ಲೂಕಿನಲ್ಲಿ 25 ಪಶು ವೈದ್ಯಕೀಯ ಸಂಸ್ಥೆಗಳು ಅವಶ್ಯಕತೆಯಿರುತ್ತದೆ. ಆದರೆ ಈಗಾಗಲೇ ಕುಣಿಗಲ್ ತಾಲ್ಲೂಕಿನಲ್ಲಿ 29 ಪಶು ವೈದ್ಯಕೀಯ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿದ್ದು, 4 ಸಂಸ್ಥೆಗಳು ಹೆಚ್ಚಾಗಿವೆ. ಮಾನ್ಯ ಸದಸ್ಯರು ಹೋದ ವರ್ಷ ಪ್ರಶ್ನೆ ಕೇಳಿರುವುದಕ್ಕೆ ನಾನು ಉತ್ತರ ಕೊಟ್ಟಿರಬಹುದು. ಆದರೆ ಇಡೀ ರಾಜ್ಯದಲ್ಲಿ ಡಾಕ್ಟರ್ ಕೊರತೆ ಬಹಳ ಇದೆ. ಈಗಾಗಲೇ ಪಶು ವೈದ್ಯಕೀಯ ಸಂಸ್ಥೆ ಇರಬಹುದು, ಪಶು ಚಿಕಿತ್ಸಾಲಯ ಘಟಕ ಇರಬಹುದು, ಇವುಗಳಲ್ಲಿ ಮೂಲಭೂತ ಸೌಕರ್ಯದ ಕೊರತೆ ಇದೆ. 770 ಮಂದಿ ಪದವೀಧರ ಪಶು ವೈದ್ಯರ ಕೊರತೆ ಇದೆ, ಮೊದಲು ಬೀದರ್ ಮತ್ತು ಬೆಂಗಳೂರಿನಲ್ಲಿ ಮಾತ್ರ ಎರಡು ಕಾಲೇಜು ಇತ್ತು, ಆದರೆ ಡಾಕ್ಟರ್ ಕೊರತೆ ನೀಗಿಸಬೇಕೆಂದು ಈಗ ಹಾಸನ ಮತ್ತು ಶಿವಮೊಗ್ಗದಲ್ಲಿ ಕಾಲೇಜುಗಳನ್ನು ಕೊಟ್ಟಿದ್ದು,

ಒಟ್ಟು 820 ವಿದ್ಯಾರ್ಥಿಗಳು ಓದುತ್ತಿದ್ದಾರೆ. ಪ್ರತಿ ವರ್ಷ 150 ವಿದ್ಯಾರ್ಥಿಗಳು ಐದು ವರ್ಷದ ಕೋರ್ಸ್ ಮುಗಿಸಿ ಹೊರಬರುತ್ತಿದ್ದಾರೆ. ಆದುದರಿಂದ ತಾತ್ಕಾಲಿಕವಾಗಿ ಸದ್ಯಕ್ಕೆ ಪಶು ವೈದ್ಯಕೀಯ ಸಂಸ್ಥೆಯನ್ನು ಕೊಡುವುದಕ್ಕಾಗುವುದಿಲ್ಲ. ಡಾಕ್ಟರ್ ಕೊರತೆ ಇರುವ ಕಾರಣ ಇದನ್ನು ಮುಂದೂಡಲಾಗಿದೆ.

ಅಧ್ಯಕ್ಷರು :– ಆಯಿತು, ಕೊಡುತ್ತೇನೆಂದು ಹೇಳಿದ್ದಾರೆ.

ಶ್ರೀ ಬಿ.ಬಿ. ರಾಮಸ್ವಾಮಿ ಗೌಡ :– ಮಾನ್ಯ ಅಧ್ಯಕ್ಷರೆ, ನಾವು ಸುಮ್ಮನೆ ಕೇಳುತ್ತಿಲ್ಲ, ನಮಗೆ ತೊಂದರೆಯಿದೆ, ನಮ್ಮಲ್ಲಿ interior villageಗಳಿದ್ದು, ಒಂದು ಸಂಚಾರಿ ಘಟಕಗಳು ಕೂಡ ಇಲ್ಲ. ತಾವು ಕನಿಷ್ಟ ಪಕ್ಷ ಸಂಚಾರಿ ಘಟಕಗಳನ್ನು ಕೊಟ್ಟರೆ ಜಾನುವಾರುಗಳಿಗೆ ಅನುಕೂಲವಾಗುತ್ತದೆ. ಜನಗಳನ್ನು ಆಸ್ಪತ್ರೆಗಳು ದೂರವಿದ್ದರೂ ಯಾವುದಾದರೂ ವಾಹನದಲ್ಲಿ ಕರೆದುಕೊಂಡು ಹೋಗುತ್ತಾರೆ. ಆದರೆ ಜಾನುವಾರುಗಳನ್ನು ಎತ್ತಿಕೊಂಡು ಬಹಳ ದೂರದ ಆಸ್ಪತ್ರೆಗಳಿಗೆ ಸಾಗಿಸುವುದಕ್ಕೆ ಆಗುವುದಿಲ್ಲ.

ಶ್ರೀ ರೇವೂ ನಾಯಕ್ ಬೆಳಮಗಿ :– ಆಯಿತು, ಜಿಲ್ಲಾಧಿಕಾರಿಗಳಿಂದ ವರದಿ ತರಸಿ ಪರಿಶೀಲನೆ ಮಾಡುತ್ತೇನೆ.

ಶ್ರೀ ಚಿಕ್ಕಣ್ಣ :– ಮಾನ್ಯ ಮಂತ್ರಿಗಳು ರಾಜ್ಯದಲ್ಲಿ 770 ಪದವೀಧರ ಪಶುವೈದ್ಯರ ಕೊರತೆ ಇದೆ ಎಂದು ಉತ್ತರ ಕೊಟ್ಟಿದ್ದಾರೆ.

ಅಧ್ಯಕ್ಷರು :– ಇದು ಉಪ ಪ್ರಶ್ನೆ ಆಗುವುದಿಲ್ಲ. ತಾವು ಬೇರೆ ರೂಪದಲ್ಲಿ ತೆಗೆದುಕೊಂಡು ಬನ್ನಿ.

ಶ್ರೀ ಚಿಕ್ಕಣ್ಣ :– ಈಗಾಗಲೇ ಪಶುವೈದ್ಯರು ಬೇರೆ ಇಲಾಖೆಯಲ್ಲಿ ಕೆಲಸವನ್ನು ಮಾಡುತ್ತಿದ್ದಾರೆ. ಅವರನ್ನು ವಾಪಸ್ಸು ಆಸ್ಪತ್ರೆಗೆ ಹಾಕಿದರೆ ಕೆಲಸ ಆಗುತ್ತದೆ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ :– ಆಸ್ಪತ್ರೆಗಳಲ್ಲಿ ಡಾಕ್ಟರುಗಳು ಇಲ್ಲ, ಅವರು E.O.ಗಳಾಗಿ ಹೋಗಿ ಕೆಲಸ ಮಾಡುವುದು ಯಾವ ಧರ್ಮ ? ನೀವು deputation cancel ಮಾಡಿ, ಅವರನ್ನು ವಾಪಸ್ಸು ಕರೆಸಿ ಡಾಕ್ಟರ್ ಕೆಲಸಕ್ಕೆ ಹಾಕಿ.

(ಗೊಂದಲ)

ಅಧ್ಯಕ್ಷರು :– ಎಲ್ಲರೂ ಈ ರೀತಿ ಎದ್ದು ನಿಂತುಕೊಂಡು ಮಾತನಾಡಿದರೆ ಹೇಗೆ?

ಶ್ರೀ ಕೆ.ಎಂ. ಶಿವಲಿಂಗೇಗೌಡ :– Veterinary doctorಗಳು ಎಲ್ಲಾ E.O. ಗಳಾಗಿ ಇನ್ನು ಏನೇನೋ ಹುದ್ದೆಗಳ ಮೇಲೆ deputation ಹೋಗುತ್ತಾರೆ. ಮಾನ್ಯ ಸಚಿವರೇ ದಯವಿಟ್ಟು deputation ಕೊಡಬೇಡಿ.

(ಗೊಂದಲ)

ಮಾನ್ಯ ಸದಸ್ಯರು :– ದಯವಿಟ್ಟು ಮಾನ್ಯ ಸಚಿವರು ಇದಕ್ಕೆ ಉತ್ತರ ಕೊಡಲಿ, ಒಂದು ಆದೇಶ ಮಾಡಿ.

ಅಧ್ಯಕ್ಷರು :– ಬೇರೆ ಕಡೆ ಕೆಲಸ ಮಾಡುತ್ತಿರುವವರನ್ನು ವಾಪಸ್ಸು ತೆಗೆದುಕೊಳ್ಳಿ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ :– ಮಾನ್ಯ ಅಧ್ಯಕ್ಷರೆ, ಅಧಿಕಾರಿಗಳು ಇಲ್ಲ, Veterinary Inspectors ಇಲ್ಲ Supervisors ಇಲ್ಲ, ಎಲ್ಲಾ ಇಲ್ಲ, ಇಲ್ಲ ಎನ್ನುವಂತೆ ಆಗಿದೆ. ನಿಮ್ಮ ಇಲಾಖೆಯವರು ಬೇರೆ ಇಲಾಖೆಯಲ್ಲಿ ಮಜಾ ಮಾಡುತ್ತಾರೆ. E.O. ಆಗಲಿ ಮತ್ತೊಬ್ಬರಾಗಲಿ, ಅವರನ್ನು ನೀವು ಏಕೆ ಅಲ್ಲಿಗೆ ಕಳುಹಿಸಿದ್ದೀರಿ ? ಅವರನ್ನು ನೀವು ವಾಪಸ್ಸು ಕರೆಸಿಕೊಂಡು ನಿಮ್ಮ ಇಲಾಖೆಯಲ್ಲಿ ಏಕೆ ಇಟ್ಟುಕೊಂಡಿಲ್ಲ. ನೀವು ಎರಡು ವರ್ಷದಿಂದ ನೇಮಕಾತಿ ಮಾಡುತ್ತೇವೆಂದು ಹೇಳುತ್ತಲೇ ಇದ್ದೀರಿ, ಆದರೆ ಇನ್ನೂ ಪ್ರಕ್ರಿಯೇ ಮುಗಿದಿಲ್ಲ. ನಾವು ಹಳ್ಳಿಗಳಲ್ಲಿ ಆಸ್ಪತ್ರೆಗಳಿಗೆ ಹೋಗುವುದಕ್ಕೆ ಆಗುತ್ತಿಲ್ಲ, ಪರಿಸ್ಥಿತಿ ಹಾಗೆ ಇದೆ.

ಶ್ರೀ ರೇವೂ ನಾಯಕ್ ಬೆಳಮಗಿ :– ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ಗೌರವಾನ್ವಿತ ಸದಸ್ಯರಿಗೆ ಎಷ್ಟು ಕಳಕಳಿ ಇದೆ, ನನಗೂ ಕೂಡ ಅಷ್ಟೇ ಕಳಕಳಿ ಇದೆ. 40 ರಿಂದ 45 ಸಿಬ್ಬಂದಿಗಳು E.O. ಆಗಿ ಕೆಲಸ ಮಾಡುತ್ತಿದ್ದರು. ನಾವು withdraw ಮಾಡಬೇಕೆಂದು ಮಾಡಿದಾಗ ಅವರು ಹೈಕೋರ್ಟ್‌ನಲ್ಲಿ stay ತೆಗೆದುಕೊಂಡು ಕೆಲಸ ಮಾಡುತ್ತಿದ್ದಾರೆ. ನಮ್ಮ ಡಿಪಾರ್ಟ್‌ಮೆಂಟ್‌ನಿಂದ ಅವರನ್ನು ವಾಪಸ್ಸು ಕರೆಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. 16 ಮಂದಿ ಕೊಡಲೇ ಬೇಕು ಎಂದು High Court ಮತ್ತೆ ಒಂದು judgement ಕೊಟ್ಟಿದೆ. ಅದರ ಬಗ್ಗೆ ನಾವು ಪರಿಶೀಲನೆ ಮಾಡುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ :– ಪರಿಶೀಲನೆ ಮಾಡುವುದು ಅಲ್ಲ, you bring your amendment. ಮಾನ್ಯ ಜಗದೀಶ್ ಶೆಟ್ಟರ್‌ರವರು ಇಲ್ಲಿಯೇ ಇದ್ದಾರೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ :– ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿ, E.O. ಗಳಾಗಿ ಕೆಲಸ ಮಾಡುತ್ತಿರುವವರು 12 ಜನ ಮಾತ್ರ, ಪಶು ಸಂಗೋಪನಾ ಇಲಾಖೆಯವರು 12 ಮಂದಿ ಮಾತ್ರ ಕೋರ್ಟ್‌ನಿಂದ ಆರ್ಡರ್ ತೆಗೆದುಕೊಂಡು ಬಂದು ಇಲ್ಲಿ ಕೆಲಸವನ್ನು ಮಾಡುತ್ತಿದ್ದಾರೆ. ನಾವು ಇಲ್ಲಿ ಇದ್ದಂತಹವರನ್ನೆಲ್ಲಾ ವಾಪಸ್ಸು ಕಳುಹಿಸಿದ್ದೇವೆ. ಈಗ 60 ಜನ E.O. ಗಳನ್ನು ನೇರವಾಗಿ ನೇಮಕಾತಿ ಮಾಡುವ ಪ್ರಕ್ರಿಯೆಯನ್ನು ನಾವು ಪ್ರಾರಂಭ ಮಾಡಿದ್ದೇವೆ. ನಮ್ಮ ಇಲಾಖೆಯಿಂದ ಸ್ವತಂತ್ರವಾಗಿ ನೇರ ನೇಮಕಾತಿ ಮಾಡುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ :– ನೀವು ನೇಮಕಾತಿ ಮಾಡಿ, ಬೇಡ ಎಂದು ಹೇಳುವುದಿಲ್ಲ. ಹೈಕೋರ್ಟ್ interfere ಆಗಿ ಏಕೆ stay ಕೊಟ್ಟಿತೆಂದರೆ, Rural Development Department ನಲ್ಲಿ Veterinaryಯವರು ಹೋಗಿ service ಮಾಡುವುದಕ್ಕೆ ಅವಕಾಶವಿದೆ ಎಂದು quota fix ಮಾಡಿದ್ದಿರಲ್ಲ, ಆ quota ವ್ಯಾಪ್ತಿಯಲ್ಲಿರುವುದರಿಂದ stay continue ಮಾಡಿದ್ದಾರೆ. ದಯಮಾಡಿ ಆ provision ತೆಗೆದು ಹಾಕಿ. Veterinary Department ಯಾರೂ ಕೇಳದಿರುವಂತಹ ಇಲಾಖೆಯಾಗಿದೆ. ಅಲ್ಲಿಗೆ ಯಾರು ಹೋಗುವುದಕ್ಕೆ ತಯಾರಿಲ್ಲ. Assistant Director ರವರು ಆಸ್ಪತ್ರೆಗೆ ಹೋಗುವುದಿಲ್ಲ. ಅಲ್ಲಿ E.O. ಆಗಿ ಕೆಲಸ ಮಾಡುವುದಕ್ಕೆ ಬರುತ್ತಾನೆ. ಏಕೆಂದರೆ ಅಲ್ಲಿರುವಂತಹ ವರಮಾನ ಇಲ್ಲಿ ಇರುವುದಕ್ಕೆ ಸಾಧ್ಯವಿಲ್ಲ. ದಯಮಾಡಿ ಇದನ್ನು ಅರ್ಥ ಮಾಡಿಕೊಂಡು amendment ತೆಗೆದುಕೊಂಡು ಬನ್ನಿ.

ಶ್ರೀ ಜಗದೀಶ್ ಶೆಟ್ಟರ್ :– ಅವರನ್ನು ಕಳುಹಿಸುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ :– ನೀವು ಕಳುಹಿಸುತ್ತೀರಿ, ಆದರೆ ಕೋರ್ಟ್‌ನಲ್ಲಿ ಸ್ಟೇ ಇರುವುದನ್ನು ತಪ್ಪಿಸಬೇಕಲ್ಲ, ಅದಕ್ಕೆ you bring an amendment.

ಶ್ರೀ ಸಿದ್ದರಾಮಯ್ಯ :– ಮಾನ್ಯ ಅಧ್ಯಕ್ಷರೆ , ಇದು ಇಡೀ ರಾಜ್ಯದಲ್ಲಿರುವಂಥ ಸಮಸ್ಯೆಯಾಗಿದೆ. Rural Development ನವರು E.O.ಗಳನ್ನು ಬಹಳ ವರ್ಷಗಳಿಂದ ಭರ್ತಿ ಮಾಡಿಕೊಂಡಿಲ್ಲ, ಈ ಹುದ್ದೆಗಳು ಖಾಲಿ ಇವೆ. ಅದಕ್ಕೆ ಏನು ಮಾಡುತ್ತಾರೆಂದರೆ, Assistant Executive Engineer ಗಳನ್ನು, Agriculture Department ನಲ್ಲಿರುವಂಥ Assistant Director ಗಳನ್ನು, Doctorಗಳನ್ನು ತೆಗೆದುಕೊಳ್ಳುತ್ತಾರೆ. ಈ ಡಾಕ್ಟರ್‌ಗಳಿಗೆ E.O. ಕೆಲಸ ಏನಾದರೂ ಗೊತ್ತಿದೆಯೇ ? ಇವರು ಧನಗಳಿಗೆ ಔಷಧಿಗಳನ್ನು ಕೊಡುವುದು ಬಿಟ್ಟು, ಇಲ್ಲಿ cheque measurement ಹೇಗೆ ಮಾಡುತ್ತಾರೆ ಡಾಕ್ಟರ್‌ಗಳಿಗೆ ಇದು

ಬರುತ್ತದೆಯೇ ? NREGS ನಲ್ಲಿ ನೋಡಿ bill ಮಾಡಿಕೊಡಬೇಕಲ್ಲಾ, ಇದು ಇವರಿಗೆ ಗೊತ್ತಾಗುತ್ತದೆಯೇ ? ಇಲ್ಲಿ ಒಂದಕ್ಕೊಂದು ಸಂಬಂಧ ಇಲ್ಲ. ಇದನ್ನು ನೀವು ನೋಡಿಕೊಂಡು ಕುಳಿತ್ತಿದ್ದೀರಿ. ಇದರಲ್ಲಿ 12 ಜನ ಅಷ್ಟೆ ಇರುವುದೆಂದರೆ, ಈ 12 ಜನರನ್ನು ಏಕೆ ಇಟ್ಟುಕೊಂಡಿದ್ದೀರಿ ? ಇವರಿಂದ ಒಳ್ಳೆಯ ಕೆಲಸವಾಗುತ್ತಿದೆಯೇ ?

ಶ್ರೀ ಜಗದೀಶ್ ಶೆಟ್ಟರ್ :– ಮೊದಲು 30 ಜನರಿದ್ದರು, ಅವರನ್ನು ವಾಪಸ್ಸು ಕಳುಹಿಸಿದ್ದೇವೆ.

ಶ್ರೀ ಸಿದ್ದರಾಮಯ್ಯ :– ಆಯಿತು, ಇವರನ್ನು ವಾಪಸ್ಸು ಕಳುಹಿಸಿ, amendment ಮಾಡಿ. ನೀವು ಅವರನ್ನು ತೆಗೆದುಕೊಳ್ಳದೇ ಹೋದರೆ ಅವರು ಏಕೆ ಬರುತ್ತಾರೆ ? ನೀವು ಅವರನ್ನು ತೆಗೆದುಕೊಳ್ಳುತ್ತಿರುವುದರಿಂದ ಅವರು ಬರುತ್ತಿದ್ದಾರೆ. ನೀವು ಅವರನ್ನು ತೆಗೆದುಕೊಳ್ಳಬಾರದು, ಒಂದು ವೇಳೆ ಅವರನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿದ್ದರೆ ಅದಕ್ಕೆ ಒಂದು amendment ಮಾಡಿ, ಬೇಡವೆಂದು ಹೇಳಿ.

ಶ್ರೀ ಜಗದೀಶ್ ಶೆಟ್ಟರ್ :– ಇವರು ಇವತ್ತು ಬಂದಿರುವವರಲ್ಲ, ಕಳೆದ 10 ವರ್ಷಗಳಿಂದ ಇದ್ದಾರೆ. ನಮ್ಮ ಸರ್ಕಾರ ಬಂದಮೇಲೆ ನಾನು ಮಂತ್ರಿಯಾದ ಮೇಲೆ ಅವರನ್ನು ತೆಗೆದುಕೊಂಡಿಲ್ಲ. ಇವರನ್ನು ನಿಮ್ಮ ಕಾಲದಲ್ಲೂ ತೆಗೆದುಕೊಂಡಿದ್ದಾರೆ, ಎಲ್ಲರ ಕಾಲದಲ್ಲೂ ತೆಗೆದುಕೊಂಡಿದ್ದಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ :– ಯಾರ ಕಾಲ ಎಂದು ಅಲ್ಲ, ನೀವು ಅದನ್ನೇ ಮಾಡುತ್ತಿರಾ?

ಶ್ರೀ ಜಗದೀಶ್ ಶೆಟ್ಟರ್ : ನಾವು ಮಾಡಿಲ್ಲ, ಬಂದ ಮೇಲೆ ವಾಪಸ್ಸು ಕಳುಹಿಸಿದ್ದೇವೆ.

ಶ್ರೀ ಸಿದ್ದರಾಮಯ್ಯ :– ಮಾನ್ಯ ಮಂತ್ರಿಯವರೆ, ಒಂದು ನಿಮಿಷ, ನೀವು ಬಂದ ಮೇಲೆ ಒಂದೇ ಒಂದು Veterinary institution ಅನ್ನು ಹೊಸದಾಗಿ open ಮಾಡಿಲ್ಲ. ನೀವು ಬಂದ ಮೇಲೆ ಆಸ್ಪತ್ರೆಗಳನ್ನು ಮಾಡಿದ್ದಿರಾ ?

ಶ್ರೀ ರೇವು ನಾಯಕ್ ಬೆಳಮಗಿ :– ಮಾಡಿಲ್ಲ.

ಶ್ರೀ ಸಿದ್ದರಾಮಯ್ಯ :– ಒಂದೇ ಒಂದು ಆಸ್ಪತ್ರೆಯನ್ನು ಮಾಡಿಲ್ಲ, ಮತ್ತೆ ಇರುವ ಹುದ್ದೆಗಳನ್ನು ಭರ್ತಿ ಮಾಡಿಲ್ಲ. ಇದು ಜಾನುವಾರುಗಳನ್ನು ರಕ್ಷಣೆ ಮಾಡುವುದು, ಜಾನುವಾರುಗಳನ್ನು ಅಭಿವೃದ್ಧಿಪಡಿಸುವಂಥ ನೀತಿ ಏನು ? ಮಾನ್ಯ ಮಂತ್ರಿಯವರೆ, ತಾವು ಕೂಡಲೇ Government Advocateಗಳಿಗೆ ಹೇಳಿ stay ತೆಗೆದುಕೊಂಡು ಬಂದಿದ್ದರೆ

ಅದನ್ನು vacate ಮಾಡಿಸಿ ಅವರಿಗೆ stay ಕೊಡುವುದಕ್ಕೆ strong ground ಇರುವುದಿಲ್ಲ, still ಹೇಗೋ stay ತೆಗೆದುಕೊಂಡು ಬಂದು ಬಿಡುತ್ತಾರೆ. ಅದನ್ನು vacate ಮಾಡಿಸಿ, ಇನ್ನು ಮುಂದೆ ಯಾವ ಡಾಕ್ಟರ್‌ಗಳನ್ನು ಬೇರೆ ಇಲಾಖೆಗಳಿಗೆ deputation ಮೇಲೆ ಕಳುಹಿಸಿಕೊಡುವುದಿಲ್ಲವೆಂದು ತೀರ್ಮಾನ ಮಾಡಿ. ಅದರಲ್ಲೂ particular ಆಗಿ E.O.ಗಳಾಗಿ ಕಳುಹಿಸಿಕೊಡುವುದಿಲ್ಲವೆಂದು ತೀರ್ಮಾನ ಮಾಡಿ. ಆ ರೀತಿ ಮಾಡಿದರೆ ಡಾಕ್ಟರ್‌ಗಳು ಅಲ್ಲೇ ಉಳಿದುಕೊಳ್ಳುತ್ತಾರೆ, ಮತ್ತೆ ಖಾಲಿ ಇರುವ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಿ. ಇದರ ಜೊತೆಗೆ ಹೊಸ institutionಗಳನ್ನು ಮಾಡಿದರೆ ಡಾಕ್ಟರ್‌ಗಳು ಎಲ್ಲಿ ಇದ್ದಾರೆ ? ನೀವು ಒಂದು institution ಅನ್ನು ಕೊಡಲಿಲ್ಲ. ನಾನು 3–4 ವರ್ಷಗಳಿಂದ ಹೊಸದಾಗಿ institutionಗಳನ್ನು ಕೊಡಿ ಎಂದು ಪತ್ರವನ್ನು ಬರೆದಿದ್ದೇನೆ. ಇವತ್ತಿನವರೆಗೂ ಜನರು ಕೇಳಿದರೆ, ಎಲ್ಲೂ ಕೂಡ ಹೊಸ institution ಇಲ್ಲ. ಅಲ್ಲಿ ಜಾನುವಾರುಗಳಿಗೆ ರೋಗ ಬಂದರೆ, ಅದನ್ನು ವಾಸಿ ಮಾಡಲು ಡಾಕ್ಟರ್‌ಗಳು ಇರುವುದಿಲ್ಲ. ಈ ರೀತಿ ಆದರೆ ಏನು ಮಾಡುತ್ತೀರಿ ? ಜಾನುವಾರುಗಳ ಅಭಿವೃದ್ಧಿ ಆಗುವುದು ಹೇಗೆ ? ದಯಮಾಡಿ ತಾವು ಇದನ್ನು ಪರಿಶೀಲನೆ ಮಾಡಿ. ಇದನ್ನು ಸರ್ಕಾರ ಗಂಭೀರವಾಗಿ ತೆಗೆದುಕೊಳ್ಳಬೇಕು. ಅದರಂತೆ ಕ್ರಮ ತೆಗೆದುಕೊಳ್ಳುವಂಥ ಕೆಲಸವನ್ನು ಮಾಡಬೇಕು.

ಶ್ರೀ ಹೆಚ್.ಕೆ. ಕುಮಾರಸ್ವಾಮಿ :– ಮಾನ್ಯ ಅಧ್ಯಕ್ಷರೆ, ಈಗ ಪಶುಸಂಗೋಪನೆ ಇಲಾಖೆಯಲ್ಲಿ ಆಯ್ಕೆ ಆಗಿರುವವರಿಗೆ ಕೆಲಸ ಮಡುವುದಕ್ಕೆ ಆಸಕ್ತಿ ಇಲ್ಲ. ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಅವರು ರುಚಿ ನೋಡಿಕೊಂಡು ಬಿಟ್ಟಿದ್ದಾರೆ, ಇವರೆಲ್ಲಾ ವಲಸೆ ಹೋಗುತ್ತಿದ್ದಾರೆ. ದಯಮಾಡಿ ತಮ್ಮ ಇಲಾಖೆಯಿಂದ ಕಾರ್ಯ ನಿರ್ವಾಹಕ ಅಧಿಕಾರಿಗಳನ್ನು ನೇಮಕ ಮಾಡಿ. ತಾವು ಎಲ್ಲಾ ಇಲಾಖೆಗಳಿಂದ ಎರವಲು ತೆಗೆದುಕೊಂಡಿದ್ದೀರಿ.

ಅಧ್ಯಕ್ಷರು :– ಸಾಕು, ಎಲ್ಲರೂ ಸಾಕಷ್ಟು ವಿಚಾರಗಳನ್ನು ಹೇಳಿದ್ದೀರಿ, ನಾನು ಮುಂದಿನ ಪ್ರಶ್ನೆಯ ಸದಸ್ಯರನ್ನು ಕರೆಯುತ್ತೇನೆ. ಈಗ ಎಲ್ಲರೂ ಸಲಹೆಗಳನ್ನು ಕೊಟ್ಟಿದ್ದಾರೆ. ಸಾಕು.

ಸಾರ್ವಜನಿಕ ಗ್ರಂಥಾಲಯ ಕಟ್ಟಡ ದುರಸ್ಥಿ

20 (143) ಡಾ: ಬಗಲಿ ಸಾರ್ವಭೌಮ ಸಾತಗೌಡ (ಇಂಡಿ):– ಮಾನ್ಯ ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಇಂಡಿ ಪಟ್ಟಣದಲ್ಲಿ ಇರುವ ಅತ್ಯಂತ ಹಳೆಯದಾದ ಸಾರ್ವಜನಿಕ ಗ್ರಂಥಾಲಯ